ಪದವಿ ಪೂರ್ವ ಕಾಲೇಜುಗಳ ಏಕರೂಪ ಪ್ರವೇಶಾವಕಾಶದ ನೀತಿ

107 (356) ಶ್ರೀ ಕುಮಾರಸ್ವಾಮಿ ಎಂ. ಪಿ. (ಮೂಡಿಗೆರೆ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಪಿಯುಸಿ ಶಿಕ್ಷಣಕ್ಕೆ 2012–13ನೇ ಸಾಲಿನಲ್ಲಿ ಪ್ರವೇಶವನ್ನು ಸಿಇಟಿ ಮಾದರಿಯಲ್ಲಿ ನಡೆಸುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಈ ಉದ್ದೇಶದಿಂದ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳಂತೆ ಖಾಸಗಿ ಪಿ.ಯು. ಕಾಲೇಜುಗಳು, ಶಿಕ್ಷಣ ಶುಲ್ಕ ವಂತಿಗೆ ವಸೂಲು ಮಾಡಲು ಈಗಿರುವ ಶುಲ್ಕ ರೂ. 20.000/– ದಿಂದ ರೂ. 40.000/–ಕ್ಕೆ ಏರಿಸಲು ಅವಕಾಶ ಮಾಡಿಕೊಡಲಾಗುವುದೇ;

ಇ) ಈ ಕ್ರಮದಿಂದ ಗ್ರಾಮಾಂತರ ಸರ್ಕಾರಿ ಪಿ.ಯು. ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುವುದಲ್ಲದೇ ಈ ಕಾಲೇಜುಗಳನ್ನು ಶಾಶ್ವತವಾಗಿ ಮುಚ್ಚುವ ವಾತಾವರಣ ನಿಯಂತ್ರಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಈ) ಸರ್ಕಾರಿ ಮತ್ತು ಖಾಸಗಿ ಪಿ.ಯು. ಕಾಲೇಜುಗಳ ಏಕರೀತಿ ಶಿಕ್ಷಣ ಶುಲ್ಕ ವಿಧಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಪ್ರಥಮ ಪಿಯುಸಿ ತರಗತಿಗೆ ರಾಜ್ಯದ 31 ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಕೇಂದ್ರೀಕೃತ ಸಾಮಾನ್ಯ ಪ್ರವೇಶವನ್ನು Virtual Counselling ಮೂಲಕ ನಡೆಸಲು ಯೋಜನೆ ಸಿದ್ಧಪಡಿಸಲಾಗುತ್ತಿದೆ.

ಆ) ಸರ್ಕಾರವು ಯಾವುದೇ ವಂತಿಕೆ ಶುಲ್ಕವನ್ನು ನಿಗದಿಪಡಿಸಿಲ್ಲ

ಇ) 31 ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಕೇಂದ್ರೀಕೃತ ಸಾಮಾನ್ಯ ಪ್ರವೇಶ ಯೋಜನೆಯನ್ನು ಜಾರಿಗೊಳಿಸಲಾಗುತ್ತಿರುವುದರಿಂದ ಗ್ರಾಮಾಂತರ ಪ್ರದೇಶಗಳ ಪದವಿ ಪೂರ್ವ ಕಾಲೇಜುಗಳಿಗೆ ಇದರಿಂದ ಯಾವುದೇ ಪರಿಣಾಮವುಂಟಾಗುವುದಿಲ್ಲ.

ಈ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.